**ಸಾಕ್ಷಿಯನ್ನು ದಿಃ 24.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದಿಃ 16.03.2023 ರಂದು ಅಪಘಾತ ಆಗಿರುತ್ತದೆ. ಅಪಘಾತವು ಎರಡು ವಾಹನಗಳ ನಡುವೆ ಆಗಿರುತ್ತದೆ ಎಂದರೆ ಸರಿ. ನಾನು 10 ನೇ ತರಗತಿವರೆಗೆ ಓದಿರುತ್ತೇನೆ. 10 ನೇ ತರಗತಿಯ ಅಂಕಪಟ್ಟಿ ಇದೆ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಾನು ದಿಃ 20.04.2005 ರಂದು ಹುಟ್ಟಿರುತ್ತೇನೆ. ನಾನು ಆ ದಿನ ಹೋಗುತ್ತಿದ್ದ ಮೋಟಾರ್ ಸೈಕಲ್ ನನ್ನ ಮಾವ ಸೋಮಶೇಖರ್ ರವರಿಗೆ ಸೇರಿದ್ದು. ನನ್ನ ಹಿಂದೆ ನನ್ನ ಅತ್ತೆ ಇದ್ದರು. ಸದರಿ ಬೈಕ್ ನ ಸಂಖ್ಯೆ ಗೊತ್ತಿಲ್ಲ. ಸದರಿ ಬೈಕ್ ಗೆ ಯಾವ ಕಂಪನಿಯಲ್ಲಿ ವಿಮೆಗೆ ಒಳಪಟ್ಟಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಮತ್ತು ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ.

ದೂರನ್ನು ನನ್ನ ತಂದೆ ದಾಖಲಿಸಿರುತ್ತಾರೆ. ಅಪಘಾತ ಆದ ದಿನವೇ ದೂರು ದಾಖಲಿಸಿರುತ್ತಾರೆ. ನಾನು ದೂರು ದಾಖಲಿಸಿರುವುದಿಲ್ಲ. ಮಾರುತಿ ಕಂಪನಿಯ ಕಾರು ಅಪಘಾತ ಪಡಿಸಿರುತ್ತದೆ. ಸದರಿ ಕಾರ್ ನಂಬರ್ ಗೊತ್ತಿಲ್ಲ. ಕಾರಿನ ಮಾಲೀಕರು ರಂಗಸ್ವಾಮಿ ಇರುತ್ತಾರೆ. ಸದರಿಯವರು ನನ್ನ ಸಂಬಂಧಿಕರಲ್ಲ. ಸದರಿಯವರು ಯಾವ ಊರಿನವರು ಎಂದು ಗೊತ್ತಿಲ್ಲ. ಸದರಿ ಕಾರು ಯಾವ ಕಂಪನಿಯಲ್ಲಿ ವಿಮೆಗೆ ಒಳಪಟ್ಟಿದೆ ಎಂದು ಗೊತ್ತಿಲ್ಲ. ಅಪಘಾತ ಆದ ದಿನ ನಾನು ವಿದ್ಯಾರ್ಥಿಯಾಗಿದ್ದೆ ಎಂದರೆ ಸರಿ. ಸರ್ಕಾರಿ ಪಧವಿ ಪೂರ್ವ ಕಾಲೇಜಿನಲ್ಲಿ 10 ನೇ ತರಗತಿ ಓದುತ್ತಿದ್ದೆ. ಅಪಘಾತ ಆದ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಸಾನಾಗಿದ್ದೆ ಎಂದರೆ ಸರಿ. ಅಪ್ರಾಪ್ತ ವಯಸ್ಕನನ್ನು ಮೋಟಾರ್ ಸೈಕಲ್ ಚಾಲನೆ ಮಾಡಲು ನೀಡಿದ್ದಾರೆ ಎಂದು ನನ್ನ ಮಾವ ಸೋಮಶೇಖರ್ ರವರ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಹೇಳಿದ ಹಾಗೆ ದಿಃ 16.03.2023 ರಂದು ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಮೊದಲು ಒಂದು ವರ್ಷ ಹಿಂದಿನಿಂದ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದೆ. ನಾನು ಎಲ್.ಎಲ್.ಆರ್ ಪಡೆದುಕೊಳ್ಳಲು ಅಥವಾ ಚಾಲನ ಪರವಾನಗಿ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿರುವುದಿಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ 1 ನೇ ಎದುರುದಾರರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದ ನಂತರ

ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡ, ಕೃಷ್ಣ ಆಸ್ಪತ್ರೆಯಲ್ಲಿ ಆನಂತರ ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುತ್ತೇನೆ.

ನಾನು 10 ನೇ ತರಗತಿ ತೇರ್ಗಡೆಯಾಗಿದ್ದು ಮುಂದೆ ವಿದ್ಯಾಭ್ಯಾಸಕ್ಕೆ ಹೋಗಿರುವುದಿಲ್ಲ. ನನಗೆ ತಂದಗೆ ನಾವು ಇಬ್ಬರು ಮಕ್ಕಳು. ಅಪಘಾತ ಆದ ಸಮಯದಲ್ಲಿ ನಾನು ವಿದ್ಯಾರ್ಥಿ ಆದ ಕಾರಣ ನನಗೆ ಸ್ವಂತ ಸಂಪಾದನೆ ಇರಲಿಲ್ಲ ಎಂದರೆ ಸಾಕ್ಷಿಯು ರಜಾ ಸಮಯದಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಕೂಲಿ ಕೆಲಸದಿಂದ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ. ಆಸ್ಪತ್ರೆಯಲ್ಲಿ ಒಂದು ವಾರ ದಾಖಲಾಗಿದ್ದೆ. ಡಾ. ಶ್ರೇಯಸ್ ಆಳ್ವ ನನಗೆ ಚಿಕಿತ್ಸೆ ನೀಡಿರುತ್ತಾರೆ. ನಾನು ಸಂಪೂರ್ಣ ಗುಣಮುಖನಾದ ಮೇಲೆ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಆಧಾರ್ ಕಾರ್ಡ್ ಅನ್ನು ಇತ್ತೀಚಿಗೆ ಮಾಡಿಸಿರುತ್ತೇನೆ. ನನ್ನ ಜನನ ಪ್ರಮಾಣ ಪತ್ರ ಇದೆ. ಅಪಘಾತವು ಮೈಸೂರು ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆ ದ್ವಿಮುಖ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಅಪಘಾತವು ಮುಖಾಮುಖಿಯಾಗಲು ಸಾಧ್ಯವಿಲ್ಲ ಎಂದರೆ ಸರಿ. ಸ್ಥಳ ನಕ್ಷೆಯನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳನ್ನು ಪರಿಹಾರಕ್ಕಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಅಪಘಾತಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲದೇ ಇರುವ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

(1 ನೇ ಎದುರುದಾರರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.